

# ಐಎಲ್‌ಓ ಒಡಂಬಡಿಕೆ 190

## ಕೆಲಸದ ಜಗತ್ತಿನಲ್ಲಿ ಹಿಂಸೆ ಮತ್ತು ಕಿರುಕುಳ

## ಬನ್ನಿ ಅ190 ರ ಅನುಮೋದನೆಗಾಗಿ ಅಭಿಯಾನ ಮಾಡೋಣ

ಈ ಒಪ್ಪಂದವು ಕಾಗದದಿಂದ ವಾಸ್ತವಕ್ಕೆ ಪರಿವರ್ತನೆಯಾಗುವುದನ್ನು ಖಚಿತಪಡಿಸಿಕೊಳ್ಳುವಲ್ಲಿ ಕಾರ್ಮಿಕ ಸಂಘಗಳ ಪಾತ್ರ ಮಹತ್ವದ್ದಾಗಿದೆ.

ಸದಸ್ಯ ರಾಷ್ಟ್ರಗಳು ಒಪ್ಪಂದವನ್ನು ಅಂಗೀಕರಿಸುವಂತೆ ಮತ್ತು ಅದನ್ನು ತಮ್ಮ ರಾಷ್ಟ್ರೀಯ ಕಾನೂನುಗಳ ಭಾಗವಾಗಿಸುವಂತೆ ಮಾಡಲು ನಾವು ಒಟ್ಟಾಗಿ ಕೆಲಸ ಮಾಡಬೇಕಾದ ಅಗತ್ಯವಿದೆ.

### ಕಾರ್ಮಿಕ ಸಂಘಗಳು ಏನು ಮಾಡಬಹುದು:

- ಜಾಗೃತಿಯನ್ನು ಮೂಡಿಸ ಬೇಕು ಮತ್ತು ಸಂಘದ ಸದಸ್ಯರಿಗೆ ಹಾಗೂ ಸಮಾಜಕ್ಕೆ ಹೆಚ್ಚಿನ ಪ್ರಮಾಣದಲ್ಲಿ ಇದರ ಬಗ್ಗೆ ಶಿಕ್ಷಣ ನೀಡಬೇಕು.
- ಪ್ರತಿಯೊಂದೂ ದೇಶದಲ್ಲಿ ಅ190 ಅನುಮೋದನೆಗಾಗಿ ಸಕ್ರಿಯವಾಗಿ ಪ್ರಚಾರ ಮಾಡಬೇಕು.
- ಕೆಲಸದ ಜಗತ್ತಿನಲ್ಲಿ ಹಿಂಸೆ ಮತ್ತು ಕಿರುಕುಳದ ವಿಷಯದ ಬಗ್ಗೆ ಜನರನ್ನು ಒಗ್ಗೂಡಿಸಬೇಕು.
- ಕೆಲಸದ ಸ್ಥಳದಲ್ಲಿ ಹಿಂಸೆ ಮತ್ತು ಕಿರುಕುಳವನ್ನು ತೊಡೆದು ಹಾಕಿ ಸಹಾಯ ಮಾಡಲು ಇತರ ಕಾರ್ಮಿಕ ಸಂಘಗಳು, ರಾಷ್ಟ್ರೀಯ ಕೇಂದ್ರಗಳು, ಎನ್‌ಜಿಓಗಳು ಮತ್ತು ವಿಶೇಷವಾಗಿ ಮಹಿಳಾ ಹಕ್ಕುಗಳ ಗುಂಪುಗಳೊಂದಿಗೆ ಮೈತ್ರಿ ಮಾಡಿಕೊಳ್ಳಬೇಕು.
- ಅನುಮೋದನೆಯನ್ನು ಪ್ರತಿಪಾದಿಸಲು ರೂಪುರೇಷೆಗಳನ್ನು ಅಭಿವೃದ್ಧಿಪಡಿಸಬೇಕು.

ಇಲ್ಲಿ ನೀವು ಪ್ರಚಾರಕ್ಕೆ ಸಂಬಂಧಿಸಿದ ಹೆಚ್ಚಿನ ಸಾಮಗ್ರಿಗಳನ್ನು ಕಾಣಬಹುದು :

ಯುನಿ ಗ್ಲೋಬಲ್ ಯೂನಿಯನ್ www.breakingthecircle.org

ಪಿಎಸ್‌ಐ www.publicservices.international/campaigns/stop-gender-based-violence-at-work?id=5676&lang=en

ಐಯುಎಫ಼ www.iuf.org/show.php?lang=en&tid=82

ಐಡಿಡಬ್ಲ್ಯುಎಫ್ www.idwfed.org/en/campaigns/c190

ಇಂಡಸ್ಟ್ರಿಯಲ್ www.industriall-union.org/women-0

ಐಎಫ್‌ಜೆ www.ifj.org/what/gender-equality.html

## ಇದು ಜೀವನವನ್ನೇ ಬದಲಾಯಿಸಬಹುದು

ಕೆಲಸದ ವಾತಾವರಣದಲ್ಲಿ ಹಿಂಸಾಚಾರ ಮತ್ತು ಕಿರುಕುಳ ಎಲ್ಲೆಡೆ ಸಂಭವಿಸಬಹುದು – ಆನ್‌ಲೈನ್, ಕೆಲಸ ಮಾಡುವ ಸ್ಥಳದಲ್ಲಿ, ಪ್ರಯಾಣದ ಸಮಯದಲ್ಲಿ, ಕಾರ್ಮಿಕರು ವಿಶ್ರಾಂತಿ ಪಡೆಯುವಲ್ಲಿ, ತಿನ್ನುವ ಸ್ಥಳದಲ್ಲಿ ಅಥವಾ ಅವರ ಆರೋಗ್ಯ ಮತ್ತು ನೈರ್ಮಲ್ಯ ಅಗತ್ಯಗಳಿಗೆ ಹಾಜರಾಗುವ ಸ್ಥಳಗಳಲ್ಲಿ, ಅಲ್ಲದೇ ಸಾಮಾಜಿಕ ಕೂಟಗಳಲ್ಲಿ ಕೂಡಾ ಸಂಭವಿಸಬಹುದು.

### ಇದನ್ನು ನಾವು ತಡೆಯಬಹುದು!

ಜೂನ್ 2019 ರಲ್ಲಿ, ಅಂತರರಾಷ್ಟ್ರೀಯ ಕಾರ್ಮಿಕ ಸಮ್ಮೇಳನವು, ಒಂದು ನವೀನ ಅಂತಾರಾಷ್ಟ್ರೀಯ ಸಾಧನವಾದ ಒಡಂಬಡಿಕೆ 190 (ಅ –190) ಮತ್ತು ಶಿಫಾರಸು 206 (ಆರ್ 206) ಅನ್ನು ಅಳವಡಿಸಿಕೊಳ್ಳುವ ಮೂಲಕ ಕೆಲಸದ ಜಗತ್ತಿನಲ್ಲಿ ಹಿಂಸಾಚಾರ ಮತ್ತು ಕಿರುಕುಳವನ್ನು ನಿಲ್ಲಿಸಿ ಎಂದು ಹೇಳಿದೆ.

ಈ ಹೊಸ ಒಡಂಬಡಿಕೆಯು ಎಲ್ಲಾ ಕಾರ್ಮಿಕರನ್ನು ಅಂದರೆ; ಇಂಟರ್ನಿಗಳು, ಅಪ್ರೆಂಟಿಸ್‌ಗಳು, ತರಬೇತಿಯಲ್ಲಿರುವವರು, ಕೆಲಸದಿಂದ ತೆಗೆದುಹಾಕಲ್ಪಟ್ಟ ಕಾರ್ಮಿಕರು, ಸ್ವಯಂಸೇವಕರು ಮತ್ತು ಉದ್ಯೋಗಾಕಾಂಕ್ಷಿಗಳು ಮುಂತಾದವರನ್ನು, ಅವರ ಒಪ್ಪಂದದ ರೂಪುರೇಷೆಗಳನ್ನು ಲೆಕ್ಕಿಸದೆ ರಕ್ಷಿಸುತ್ತದೆ.

- ಇದು ಲಿಂಗ–ಆಧಾರಿತ ಹಿಂಸಾಚಾರದ ಮೇಲೆ ತೀವ್ರ ಗಮನ ಕೊಡುತ್ತದೆ.
- ಕೆಲಸದ ಜಗತ್ತಿನಲ್ಲಿ ಹಿಂಸೆ ಮತ್ತು ಕಿರುಕುಳ ಮಹಿಳೆಯರ ಮೇಳೆ ವಿಪರೀತ ಪ್ರಭಾವ ಬೀರುತ್ತದೆ.
- ಇದು ಸಾರ್ವಜನಿಕ ಮತ್ತು ಖಾಸಗಿ ವಲಯ, ಗ್ರಾಮೀಣ ಮತ್ತು ನಗರ, ಔಪಚಾರಿಕ ಮತ್ತು ಅನೌಪಚಾರಿಕ ಆರ್ಥಿಕತೆಯ ಎಲ್ಲಾ ಕ್ಷೇತ್ರಗಳನ್ನೂ ಒಳಗೊಂಡಿದೆ.
- ಇದರ ವ್ಯಾಪ್ತಿಯು ಇಡೀ ಕೆಲಸದ ಜಗತ್ತು, ಇದು ಕೇವಲ ನೈಜ ಕೆಲಸದ ಸ್ಥಳಕ್ಕಿಂತ ಹಿರಿದಾಗಿದೆ. ಒಡಂಬಡಿಕೆ 190 ಯಾರನ್ನೂ ಬಿಟ್ಟಿಲ್ಲ.

### ಅ190 ಏಕೆ ಮಹತ್ವದ್ದಾಗಿದೆ?

- ಕೆಲಸದ ಜಗತ್ತಿನಲ್ಲಿ ಹಿಂಸೆ ಮತ್ತು ಕಿರುಕುಳವನ್ನು ಸಹಿಸಲಾಗುವುದಿಲ್ಲ.
- ಇದು ಕೆಲಸದ ಜಗತ್ತಿನಲ್ಲಿ ಹಿಂಸೆ ಮತ್ತು ಕಿರುಕುಳವನ್ನು ಕೊನೆಗೊಳಿಸುವ ಗುರಿಯಿಟ್ಟು ಕೊಂಡಿರುವ ಮೊದಲ ಅಂತರರಾಷ್ಟ್ರೀಯ ಮಾನದಂಡವಾಗಿದೆ.
- ಹಿಂಸೆ ಮತ್ತು ಕಿರುಕುಳದಿಂದ ಮುಕ್ತವಾದ ಕೆಲಸದ ಜಗತ್ತು ಪ್ರತಿಯೊಬ್ಬರ ಹಕ್ಕು ಎಂದು ಅದು ಗುರುತಿಸುತ್ತದೆ.
- ಒಡಂಬಡಿಕೆಯು ರಾಷ್ಟ್ರೀಯ ಮಸೂದೆಗಳಲ್ಲಿ ಈಗ ಇರುವ ಲೋಪವನ್ನು ಸರಿಪಡಿಸುತ್ತದೆ.

## ನಿಲುವುಗಳನ್ನು ಬದಲಾಯಿಸುವುದು ಮತ್ತು ಲಿಂಗ ಸಮಾನತೆಯನ್ನು ಪ್ರೋತ್ಸಾಹಿಸುವುದು

ಕೆಲಸದ ಜಗತ್ತಿನಲ್ಲಿ ನಾವೆಲ್ಲರೂ – ಸರ್ಕಾರಗಳು, ಉದ್ಯೋಗದಾತರು ಮತ್ತು ಕಾರ್ಮಿಕರು – ಪರಸ್ಪರ ಗೌರವ ಮತ್ತು ಘನತೆಯ ಆಧಾರದ ಮೇಲೆ ಕೆಲಸದ ಸಂಸ್ಕೃತಿಯನ್ನು ಒದಗಿಸಲು ಮತ್ತು ಉಳಿಸಿಕೊಳ್ಳಲು ಒಂದು ಪಾತ್ರವನ್ನು ವಹಿಸುತ್ತೇವೆ.

- ಕೆಲಸದ ಜಗತ್ತಿನಲ್ಲಿ ತಾರತಮ್ಯ ಮತ್ತು ಅಸಮಾನತೆಯ ವಿರುದ್ಧ ಹೋರಾಡಲು ಒಡಂಬಡಿಕೆಯು ಒಂದು ಅರ್ಥಪೂರ್ಣ ಸಾಧನವಾಗಿದೆ.
- ಮಹಿಳೆಯರು, ವಲಸಿಗರು, ವಿಕಲಚೇತನರು ಮತ್ತು ವಿವಿಧ ರೀತಿಯಲ್ಲಿ ಗುರುತಿಸಲ್ಪಡುವವರು, ಜನಾಂಗ ಮತ್ತು ಜನಾಂಗೀಯತೆ, ಸ್ಥಳೀಯ ಸ್ಥಿತಿ, ಲೈಂಗಿಕ ದೃಷ್ಟಿಕೋನ ಮತ್ತು ಲಿಂಗ ಸೇರಿದಂತೆ ಎಲ್ಲರಿಗೂ ಉದ್ಯೋಗ ಮತ್ತು ಉದ್ಯೋಗದಲ್ಲಿ ಸಮಾನತೆ ಮತ್ತು ತಾರತಮ್ಯರಹಿತ ಹಕ್ಕನ್ನು ಖಾತ್ರಿಪಡಿಸುವ ಶಾಸನವನ್ನು ಸರ್ಕಾರಗಳು ಅಳವಡಿಸಿಕೊಳ್ಳಬೇಕು ಎಂದು ಒಡಂಬಡಿಕೆ ಹೇಳುತ್ತದೆ.
- ಒಡಂಬಡಿಕೆಯಲ್ಲಿ ಸೂಚಿಸಿರುವಂತೆ ಕೆಲಸದ ಸ್ಥಳದ ಅಪಾಯದ ಅಂದಾಜುಗಳು ವರ್ತನೆಗಳನ್ನು ಬದಲಾಯಿಸಲು ಸಹ ಸಹಾಯ ಮಾಡುತ್ತದೆ, ಏಕೆಂದರೆ ಅವುಗಳು ಲಿಂಗ ಆಧಾರಿತ ಹಿಂಸೆ ಮತ್ತು ಕಿರುಕುಳದ ಸಾಧ್ಯತೆಯನ್ನು ಹೆಚ್ಚಿಸುವ ಅಂಶಗಳನ್ನು ಗಣನೆಗೆ ತೆಗೆದುಕೊಳ್ಳಬಹುದು (ಲಿಂಗ, ಸಾಂಸ್ಕೃತಿಕ ಮತ್ತು ಸಾಮಾಜಿಕ ರೂಢಿಗಳಂತೆ).
- ಮತ್ತು ಅ190 ಮೊದಲ ಬಾರಿಗೆ, ಕೌಟುಂಬಿಕ ಹಿಂಸಾಚಾರವನ್ನು ಕೂಡಾ, ಉದ್ಯೋಗದ ಮೇಲೆ ಪರಿಣಾಮ ಬೀರುವ ಜೊತೆಗೆ ಕಾರ್ಮಿಕರ ಆರೋಗ್ಯ ಮತ್ತು ಸುರಕ್ಷತೆಯ ಮೇಲೆ ಪರಿಣಾಮ ಬೀರುವ ಒಂದು ಅಂಶವನ್ನಾಗಿ ಸೇರಿಸಿಕೊಂಡಿದೆ.

### ಹಿಂಸೆ ಮತ್ತು ಕಿರುಕುಳ ಎಂದರೇನು?

- ಹಿಂಸೆ ಮತ್ತು ಕಿರುಕುಳವು ಸ್ವೀಕಾರಾರ್ಹವಲ್ಲದ ನಡವಳಿಕೆಗಳು ಮತ್ತು ಅಭ್ಯಾಸಗಳು ಅಥವಾ ಬೆದರಿಕೆಗಳು, ಇದು ದೈಹಿಕ ಅಥವಾ ಮಾನಸಿಕ, ಲೈಂಗಿಕ ಅಥವಾ ಆರ್ಥಿಕ ಹಾನಿಯ ಗುರಿಯೊಂದಿಗೆ, ಅಥವಾ ಅದನ್ನು ಉಂಟುಮಾಡುವ ಅಥವಾ ಉಂಟುಮಾಡಬಹುದಾದ ಸಾಧ್ಯತೆಯೊಂದಿಗೆ ಒಮ್ಮೆ ಅಥವಾ ಹಲವು ಬಾರಿ ಸಂಭವಿಸಬಹುದು.
- ಹಿಂಸೆ ಮತ್ತು ಕಿರುಕುಳ ದೈಹಿಕ ಕಿರುಕುಳಕ್ಕಿಂತ ಹೆಚ್ಚಿನ ಪರಿಣಾಮ ಬೀರುತ್ತದೆ. ಇದು ಲೈಂಗಿಕ ಕಿರುಕುಳ, ಮೌಖಿಕ ಮತ್ತು ಭಾವನಾತ್ಮಕ ನಿಂದನೆ, ಬೆದರಿಸುವಿಕೆ, ಗುಂಪುಗಾರಿಕೆ, ಬೆದರಿಕೆಗಳು ಮತ್ತು ಹಿಂಬಾಲಿಸುವಿಕೆಯ ರೂಪವನ್ನು ತೆಗೆದುಕೊಳ್ಳಬಹುದು. ಸಂಪನ್ಮೂಲಗಳ ನಿರಾಕರಣೆ ಅಥವಾ ಸೇವೆಗಳಿಗೆ ಪ್ರವೇಶ ನಿರಾಕರಿಸುವುದು ಮತ್ತು ಸ್ವಾತಂತ್ರ್ಯದ ಇತರ ಅಭಾವಗಳು ಸಹ ಹಿಂಸೆಯ ರೂಪಗಳಾಗಿವೆ.
- ದುಷ್ಕರ್ಮಿಗಳು ಉದ್ಯೋಗದಾತರು, ವ್ಯವಸ್ಥಾಪಕರು, ಮೇಲ್ವಿಚಾರಕರು, ಗೆಳೆಯರು, ಸಹೋದ್ಯೋಗಿಗಳು, ಹಾಗೆಯೇ ಗ್ರಾಹಕರು, ಉದ್ಯೋಗದಾತರ ಸಂಬಂಧಿಕರು ಅಥವಾ ಸ್ನೇಹಿತರು ಮತ್ತು ಸೇವಾ ಪೂರೈಕೆದಾರರಂತಹ ಮೂರನೇ ವ್ಯಕ್ತಿಗಳು ಆಗಿರಬಹುದು.
- ಹಿಂಸಾಚಾರವು ಪುರುಷರು ಮತ್ತು ಮಹಿಳೆಯರು ಇಬ್ಬರ ಮೇಲೂ ಪರಿಣಾಮ ಬೀರುತ್ತದೆ, ಆದರೂ ಮಹಿಳೆಯರ ಮೇಲೆ ವಿಪರೀತ ಪರಿಣಾಮ ಬೀರುತ್ತದೆ.
- ಒಬ್ಬ ವ್ಯಕ್ತಿಯ ಲೈಂಗಿಕತೆ ಅಥವಾ ಲಿಂಗದ ಆಧಾರದ ಮೇಲೆ ಮಾಡಿದಾಗ ಅದನ್ನು ಲಿಂಗ–ಆಧಾರಿತ ಹಿಂಸೆ ಎಂದು ಕರೆಯಲಾಗುತ್ತದೆ.
- ಆರ್ಥಿಕ ಸ್ಥಾನಮಾನ ಹೇಗೆಯೇ ಇದ್ದರೂ ಮಹಿಳೆಯರು ಮತ್ತು ಹುಡುಗಿಯರಲ್ಲಿ ಮೂವರಲ್ಲಿ ಒಬ್ಬರು ತಮ್ಮ ಜೀವಿತಾವಧಿಯಲ್ಲಿ ಹಿಂಸಾಚಾರವನ್ನು ಅನುಭವಿಸುತ್ತಾರೆ.

## ಅ190 ಮತ್ತು ಟ್ರೇಡ್ ಯೂನಿಯನ್ಸ್ – ಇದು ನಮ್ಮ ಸಾಧನ ಮತ್ತು ನಾವು ಇದನ್ನು ಉಪಯೋಗಿಸಿಕೊಳ್ಳಬೇಕು

### ಒಡಂಬಡಿಕೆ 190 ರ ಅಡಿಯಲ್ಲಿ:

- ಕೌಟುಂಬಿಕ ಹಿಂಸೆ ಸೇರಿದಂತೆ ಲಿಂಗ ಆಧಾರಿತ ಹಿಂಸೆ ಮತ್ತು ಕಿರುಕುಳವನ್ನು ಕೆಲಸದಲ್ಲಿ ಸುರಕ್ಷತೆ ಮತ್ತು ಆರೋಗ್ಯದ ಮುಖ್ಯವಾಹಿನಿಗೆ ತರಬೇಕು.
- ಹಿಂಸಾಚಾರ ಮತ್ತು ಕಿರುಕುಳವನ್ನು ತಡೆಗಟ್ಟಲು ಉದ್ಯೋಗದಾತರು ಕಾರ್ಮಿಕ ಸಂಘಗಳೊಂದಿಗೆ ಸಮಾಲೋಚಿಸಿ ಕ್ರಮಗಳನ್ನು ತೆಗೆದುಕೊಳ್ಳಬೇಕು ಮತ್ತು ಕೆಲಸದ ಸ್ಥಳ ನೀತಿಗಳನ್ನು ಅಭಿವೃದ್ಧಿಪಡಿಸಬೇಕು.
- ಲಿಂಗ ಆಧಾರಿತ ಹಿಂಸಾಚಾರ ಸೇರಿದಂತೆ ಕೆಲಸದ ಜಗತ್ತಿನಲ್ಲಿ ಹಿಂಸಾಚಾರ ಮತ್ತು ಕಿರುಕುಳದ ತಡೆಗೆ ಸಂಪನ್ಮೂಲಗಳನ್ನು ಮತ್ತು ತರಬೇತಿಯನ್ನು ಕಾರ್ಮಿಕ ಸಂಘಗಳಿಗೆ ಒದಗಿಸಲು ಇದು ರಾಜ್ಯಗಳಿಗೆ ತಾಕೀತು ಮಾಡುತ್ತದೆ.

ಎರಡು ಐಎಲ್‌ಓ ಸದಸ್ಯರಾಷ್ಟ್ರಗಳು ಇದನ್ನು ಅನುಮೋದಿಸಿದ 12 ತಿಂಗಳ ನಂತರ ಅ–190 ಜಾರಿಗೆ ಬರಲಿದೆ. ಆದರೆ ಕಾರ್ಮಿಕ ಸಂಘಗಳು ಅನುಮೋದನೆಗಾಗಿ ಕಾಯುವ ಅಗತ್ಯವಿಲ್ಲ; ಕಾರ್ಮಿಕರ ಜೀವನವನ್ನು ಬದಲಾಯಿಸಲು ನಾವು ಈಗಾಗಲೇ ಈ ಕ್ರಮವನ್ನು ಬಳಸಬೇಕು.

**ಐಎಲ್‌ಓ ಒಡಂಬಡಿಕೆ 190**

**ಅ190 ಕಾರ್ಮಿಕ ಜಗತ್ತಿನಲ್ಲಿ ಹಿಂಸೆ ಮತ್ತು ಕಿರುಕುಳದ ವಿರುದ್ಧ ಹೋರಾಡಲು ಕಾರ್ಮಿಕ ಸಂಘಗಳು ಮತ್ತು ಇತರ ಭಾಗೀದಾರರಿಗೆ ಒಂದು ಚಲನಗತಿಯನ್ನು ನೀಡುತ್ತದೆ. ನಾವೀಗ ಅದನ್ನು ಬಳಸಿಕೊಳ್ಳೋಣ!**

### ನಾವೀಗ ಅದನ್ನು ಬಳಸಿಕೊಳ್ಳೋಣ!

- ಅಭಿಯಾನ ಮತ್ತು ಸಾಮೂಹಿಕ ಚರ್ಚೆಯ ಮೂಲಕ ತಾರತಮ್ಯ ಮಾಡದಿರಲು ಮತ್ತು ಸಮಾನತೆಯನ್ನು ಉತ್ತೇಜಿಸಿ.
- ಕೆಲಸದ ಜಗತ್ತಿನಲ್ಲಿ ಹಿಂಸೆ ಮತ್ತು ಕಿರುಕುಳ ಎಂದರೆ ಏನು ಎಂದು ಸದಸ್ಯರಿಗೆ ತಿಳಿಸಿ.
- ಅ190 ಮತ್ತು ಅದರ ಮಹತ್ವದ ಬಗ್ಗೆ ಸದಸ್ಯರಲ್ಲಿ ಜಾಗೃತಿ ಮೂಡಿಸಿ. ಅ190 ಎನ್ನುವುದು ಜೀವನವನ್ನು ಬದಲಾಯಿಸುವ ಒಡಂಬಡಿಕೆಯಾಗಿದ್ದು, ಇದು ಲಕ್ಷಾಂತರ ಕಾರ್ಮಿಕರಿಗೆ ಸುರಕ್ಷಿತ ಕೆಲಸದ ವಾತಾವರಣವನ್ನು ಒದಗಿಸಲು ಸಹಾಯ ಮಾಡುತ್ತದೆ, ಎಲ್ಲಾ ರೀತಿಯ ಹಿಂಸೆ ಮತ್ತು ಕಿರುಕುಳಗಳನ್ನು, ವಿಶೇಷವಾಗಿ ಲಿಂಗ ಆಧಾರಿತ ಹಿಂಸೆಯನ್ನು ತೊಡೆದುಹಾಕಲು ನೆರವಾಗುತ್ತದೆ.
- ಈ ಸೂಚನೆಗಳ ಆಧಾರದ ಮೇಲೆ ಸಾಮೂಹಿಕ ಚರ್ಚೆ ಆಧಾರಿತ ಒಪ್ಪಂದಗಳಲ್ಲಿ ಭಾಷೆಯನ್ನು ಸೇರಿಸಿ (ಅ190 / ಖ206).
- ಆರೋಗ್ಯ ಮತ್ತು ಸುರಕ್ಷತಾ ನಿಯಮಗಳಲ್ಲಿ ಹಿಂಸೆ ಮತ್ತು ಕಿರುಕುಳದ ತಡೆ ಮತ್ತು ಅದರಲ್ಲೂ ಮುಖ್ಯವಾಗಿ ಲಿಂಗ ಆಧಾರಿತ ದೌರ್ಜನ್ಯ ತಡೆ ನೀತಿಗಳು ಒಳಗೊಂಡಿರುವುದನ್ನು ಖಚಿತಪಡಿಸಿಕೊಳ್ಳಲು ಉದ್ಯೋಗದಾತರೊಂದಿಗೆ ಕಾರ್ಯನಿರ್ವಹಿಸಿ.
- ಕೆಲಸದ ಜಗತ್ತಿನಲ್ಲಿ ಹಿಂಸೆ ಮತ್ತು ಕಿರುಕುಳದ ವಿರುದ್ಧ ಹೋರಾಡಲು ಸೂಚನೆಗಳ (ಅ190 / ಖ206) ಆಧಾರದ ಮೇಲೆ ಭಾಷೆಯನ್ನು ಸೇರಿಸಲು ಜಾಗತಿಕ ಚೌಕಟ್ಟಿನ ಒಪ್ಪಂದಗಳ ಸಮಾಲೋಚನೆಯಲ್ಲಿ ಜಾಗತಿಕ ಯೂನಿಯನ್ ಫೆಡರೇಷನ್‌ಗಳ ಕಾರ್ಯವನ್ನು ಬೆಂಬಲಿಸಿ.